# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ:1096/2020

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಈರೇಶ್.ಟಿ | ಸಿಡಬ್ಲ್ಯೂ-15 |
| ತಂದೆಯ/ಗಂಡನ ಹೆಸರು | - | ತಿಮ್ಮಪ್ಪ | ಪಿಡಬ್ಲ್ಯೂ-7 |
| ವಯಸ್ಸು | - | ಸು. 40 ವರ್ಷ | ಪ್ರ.ವ.ಬೋ ದಿನಾಂಕ:16.01.2025 |
| ಉದ್ಯೋಗ | - | ಮುಖ್ಯ ಪೇದೆ, ಮಹಿಳಾ ಪೋಲಿಸ್ ಠಾಣೆ, ಚಿತ್ರದುರ್ಗ | |
| ವಾಸ | - | ಚಿತ್ರದುರ್ಗ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

2023 ರಿಂದ ಆಗಸ್ಟ್ 2024 ರವರೆಗೆ ಐಮಂಗಲ ಪೋಲಿಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-17 ರವರ ಮೌಖಿಕ ಆದೇಶದ ಮೇರೆಗೆ ಅಪಘಾತ ಪಡಿಸಿದ MH-14-GU-8052 ವಾಹನವನ್ನು ಪತ್ತೆ ಮಾಡಲು ತಿಳಿಸಿದ ಮೇರೆಗೆ ನಾನು ಪತ್ತೆ ಕಾರ್ಯ ಶುರು ಮಾಡಿ, ಹಿರಿಯೂರು-ಬೆಂಗಳೂರು ಬೈಪಾಸ್ ರಸ್ತೆಯಲ್ಲಿ ಸದರಿ ವಾಹನವನ್ನು ಚಾಲಕನ ಸಮೇತ ವಶಕ್ಕೆ ಪಡೆದು ಐಮಂಗಲ ಠಾಣೆಗೆ ತಂದು ಚಾಸಾ-17 ರ ಮುಂದೆ ಹಾಜರು ಪಡಿಸಿರುತ್ತೇನೆ. ಸದರಿ ವಾಹನವನ್ನು ಚಾಸಾ-17 ರವರು ನಿಪಿ-7 ಪಂಚನಾಮೆ ಮೂಲಕ ಚಾಸಾ-6 ಮತ್ತು 7 ರವರ ಸಮಕ್ಷಮ ಬೆ.9.00 ರಿಂದ 9.45 ರವರೆಗೆ ಪಂಚನಾಮೆ ಜರುಗಿಸಿ ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡರು. ಸಾಕ್ಷಿಯು ನಿಪಿ-7 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು **ನಿಪಿ-7(ಬಿ)** ಎಂದು ಗುರುತಿಸಲಾಯಿತು. ಈ ಕುರಿತು ಚಾಸಾ-17 ರವರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ.ಬಿ ಎಲ್ ಎಸ್ ವಕೀಲರಿಂದಃ–**

ಚಾಸಾ–17 ರವರು ರಾತ್ರಿ 12.00 ಗಂಟೆಗೆ ಮೌಖಿಕ ಆದೇಶ ಮಾಡಿರುತ್ತಾರೆ. ಸದರಿ ವಾಹನವು ಬೈಪಾಸ್ ರಸ್ತೆಯಲ್ಲಿ ಇದ್ದ ಬಗ್ಗೆ ನನಗೆ ಮೊದಲೇ ಮಾಹಿತಿ ಇರಲಿಲ್ಲ. ದಿಃ25.05.2019 ರಂದು ಚಾಸಾ–17 ರವರು ವಾಹನ ಪತ್ತೆಗಾಗಿ ನನಗೆ ಯಾವುದೇ ಮೌಖಿಕ ಆದೇಶ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ–7 ರಂತೆ ಯಾವುದೇ ಅಮಾನತ್ತು ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–7 ನ್ನು ನಾನು ಮತ್ತು ತನಿಖಾಧಿಕಾರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಯಾವುದೇ ಅಂಶಗಳು ಗೊತ್ತಿರದೇ ಇದ್ದರೂ, ತನಿಖಾಧಿಕಾರಿಗಳ ಮಾತು ಕೇಳಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.